**ಓ ಎಸ್ ನಂ. 236/2018**
**ಪಿ. ಡಬ್ಲ್ಯೂ: 1**

**ದಿ:05.01.2023 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಂ.ಎಸ್.ಎಸ್ ವಕೀಲರಿಂದಃ**

ನಾನು ಬೆಂಗಳೂರಿನಲ್ಲಿ ಕೆಲಸ ಮಾಡುತ್ತೇನೆ ಎಂದರೆ ಸರಿ. ನಾನು ಸುಮಾರು 2-3 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ವಾದಿಯಾದ ನನ್ನ ತಂದೆ ನನ್ನ ಹೆಸರಿಗೆ ಜಿ.ಪಿ.ಎ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ವಾದಿಯಾದ ನನ್ನ ತಂದೆ ಪ್ರಸ್ತುತ ದಾವೆಯನ್ನು ಹೂಡಿದ ನಂತರ ನನ್ನ ಹೆಸರಿಗೆ ಜಿ.ಪಿ.ಎ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಪ್ರಸ್ತುತ ದಾವೆಯನ್ನು ಹೂಡಿ ಎಲ್ಲಾ ದಾವೆಗೆ ಸಂಬಂಧಪಟ್ಟ ದಾಖಲೆಗಳಿಗೆ ನನ್ನ ತಂದೆಯವರೇ ಸಹಿ ಹಾಕಿರುತ್ತಾರೆ ಎಂದರೆ ಸರಿ.

ನನ್ನ ತಂದೆಯವರು ದಾವೆಯನ್ನು ಹೂಡುವಾಗ ದಾವೆಗೆ ಸಂಬಂಧಪಟ್ಟ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಆರೋಗ್ಯವಾಗಿದ್ದು, ನ್ಯಾಯಾಲಯದ ಕಲಾಪಗಳಿಗೆ ಬರುವಂತೆ ಇದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ನನ್ನ ತಂದೆ ನರ ದೌರ್ಬಲ್ಯ, ಗೂನು ಬೆನ್ನು ಮತ್ತಿತರ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದಾರೆ ಎಂದು ನುಡಿದಿರುತ್ತಾರೆ. ನನ್ನ ತಂದೆಗೆ ಅನಾರೋಗ್ಯವಿರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಪ್ರಸ್ತುತ ದಾವೆಯನ್ನು ಹೂಡುವ ದಿನ ನನ್ನ ತಂದೆ ನ್ಯಾಯಾಲಯಕ್ಕೆ ಬಂದಿದ್ದರು ಎಂದರೆ ಸರಿ. ನನ್ನ ತಂದೆಯವರಿಗೆ ಸಧ್ಯ ಸುಮಾರು 70 ವರ್ಷ ವಯಸ್ಸಾಗಿರುತ್ತದೆ.

ನನ್ನ ಅಜ್ಜನ ಹೆಸರು ಬಸಪ್ಪ ಎಂದರೆ ಸರಿ. ಬಸಪ್ಪನವರ ತಂದೆಯವರ ಹೆಸರು ಹನುಮಂತಪ್ಪ ಎಂದರೆ ಸರಿ. ಹನುಮಂತಪ್ಪನವರಿಗೆ 5 ಜನ ಮಕ್ಕಳು ಎಂದರೆ ಸರಿ. ಹನುಮಂತಪ್ಪನವರ 5 ಜನ ಮಕ್ಕಳ ಹೆಸರು ಹೇಳಲು ನನಗೆ ಬರುವುದಿಲ್ಲ. ನನ್ನ ಅಜ್ಜ ಬಸಪ್ಪನವರ ತಮ್ಮನ ಹೆಸರು ಮಲ್ಲಪ್ಪ ಎಂದರೆ ಸರಿ. ಮಲ್ಲಪ್ಪನವರಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ. ಬಸಪ್ಪ, ಮಲ್ಲಪ್ಪ ಮತ್ತು ಇತರೆ ಸಹೋದರರ ನಡುವೆ ವಿಭಾಗವಾಗಿರುವ ವಿಷಯ ನನಗೆ ಗೊತ್ತಿಲ್ಲ. ಹನುಮಂತಪ್ಪನವರಿಗೆ 5 ಜನ ಮಕ್ಕಳಿರುವುದು, ಅವರವರ ನಡುವೆ ವಿಭಾಗವಾಗಿರುವ ವಿಷಯ ನನ್ನ ತಂದೆಯವರಿಗೆ ಗೊತ್ತು ಎಂದರೆ ಸರಿ.

ಕಲ್ಲಹಳ್ಳಿ ಗ್ರಾಮದ ಸರ್ವೆ ನಂ:7 ರಲ್ಲಿ ಬಸಪ್ಪನವರಿಗೆ 2 ½ ಎಕರೆ ಹಾಗೂ ಮಲ್ಲಪ್ಪನವರಿಗೆ 2 ½ ಎಕರೆ ಜಮೀನು ಇತ್ತು ಎಂದರೆ ಸರಿ. ಮಲ್ಲಪನವರಿಗೆ ಮಕ್ಕಳಿಲ್ಲದ ಕಾರಣ, ಸದರಿಯವರು ಬಸಪ್ಪನೊಂದಿಗೆ ವಾಸವಿದ್ದರು ಎಂದರೆ ಸರಿ. ಬಸಪ್ಪನವರು ಮತ್ತು ಅವರ ಸಹೋದರರೆಲ್ಲರೂ ವ್ಯವಸಾಯವನ್ನೇ ಮಾಡುತ್ತಿದ್ದರು ಎಂದರೆ ಸರಿ. 1 ನೇ ದಾವಾ ಆಸ್ತಿಯನ್ನು ಮಲ್ಲಪ್ಪನವರು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿ. 2 ನೇ ದಾವಾ ಆಸ್ತಿಯನ್ನು 5 ನೇ ಪ್ರತಿವಾದಿಯವರ ಹೆಸರಿನಲ್ಲಿ ಖರೀದಿಸಿರುತ್ತಾರೆ ಎಂದರೆ ಸರಿ. 3 ನೇ ದಾವಾ ಆಸ್ತಿಯನ್ನು 1 ರಿಂದ 3 ನೇ ಪ್ರತಿವಾದಿಗಳ ತಂದೆಯಾದ ತಿಮ್ಮಯ್ಯನವರ ಹೆಸರಿನಲ್ಲಿ ಖರೀದಿಸಿರುತ್ತಾರೆ ಎಂದರೆ ಸರಿ.

ನನ್ನ ತಂದೆ 1997 ನೇ ಇಸವಿಯಲ್ಲಿ ಒಟ್ಟು ಕುಟುಂಬದಿಂದ ಬೇರೆಯಾಗಿರುತ್ತಾರೆ ಎಂದರೆ ಸರಿ. ನನ್ನ ತಂದೆ ವ್ಯವಸಾಯವನ್ನೇ ಮಾಡುತ್ತಿದ್ದರು ಎಂದರೆ ಸರಿ. 1 ನೇ ದಾವಾ ಅನುಸೂಚಿ ಸ್ವತ್ತಿನ ಪಶ್ಚಿಮ ಭಾಗದ 20 ಗುಂಟೆ ಜಮೀನು, 2 ನೇ ದಾವಾ ಸ್ವತ್ತಿನ ಉತ್ತರ ಭಾಗದ 20 ಗುಂಟೆ ಜಮೀನು, 3 ನೇ ದಾವಾ ಸ್ವತ್ತಿನ ದಕ್ಷಿಣ ಭಾಗದ 1 ಎಕರೆ 20 ಗುಂಟೆ ಜಮೀನು ನನ್ನ ತಂದೆಯ ಭಾಗಕ್ಕೆ ಬಂದಿದೆ ಎಂದರೆ ಸರಿಯಲ್ಲ.

ನನ್ನ ತಂದೆಯವರಿಗೆ ತಿಳಿಯದಂತೆ, ಸುಮಾರು 1996-1997 ನೇ ಇಸವಿಯಲ್ಲಿ, ನನ್ನ ತಂದೆಯ ತಮ್ಮಂದಿರಾದ 1 ರಿಂದ 3 ನೇ ಪ್ರತಿವಾದಿಗಳ ತಂದೆ ತಿಮ್ಮಯ್ಯ ಮತ್ತು 5 ನೇ ಪ್ರತಿವಾದಿಯಾದ ರಂಗಸ್ವಾಮಿಯವರು ವಿಭಾಗ ಮಾಡಿಕೊಂಡು ಅವರವರ ಹೆಸರಿಗೆ ಖಾತೆಯನ್ನು ಬದಲಾವಣೆ ಮಾಡಿಕೊಂಡಿರುತ್ತಾರೆ. ತಿಮ್ಮಯ್ಯ ಮತ್ತು ರಂಗಸ್ವಾಮಿಯವರು ಅವರವರ ಹೆಸರಿನ ಖಾತೆಗಳ ಜಮೀನಿನಲ್ಲಿ ಅವರವರು ಬೇರೆ ಬೇರೆ ಸ್ವಾಧೀನದಲ್ಲಿರುತ್ತಾರೆ ಎಂದರೆ ಸಾಕ್ಷಿಯು ತಿಮ್ಮಯ್ಯ ಮತ್ತು ರಂಗಸ್ವಾಮಿಯವರು ಒಟ್ಟಿಗೆ ಸ್ವಾಧೀನದಲ್ಲಿರುತ್ತಾರೆ ಎಂದು ನುಡಿದಿರುತ್ತಾರೆ. ಮಲ್ಲಪ್ಪನವರ ಜಮೀನನ್ನೂ ಸಹ ತಿಮ್ಮಯ್ಯ ಮತ್ತು ರಂಗಸ್ವಾಮಿರವರು ಅನುಭವಿಸುತ್ತಿದ್ದಾರೆ ಎಂದರೆ ಸರಿ.

ನನ್ನ ತಂದೆಯವರ ಹೆಸರಿನಲ್ಲಿ 4 ಸ್ವತ್ತುಗಳಿಗೆ ಸಂಬಂಧಿಸಿದಂತೆ ಖಾತೆಯಾಗಿರುತ್ತದೆ ಎಂದರೆ ಸರಿ. 1 ನೇ ದಾವಾ ಸ್ವತ್ತಿನಲ್ಲಿ ನನ್ನ ತಂದೆಯವರ ಹೆಸರಿಗೆ 20 ಗುಂಟೆ ಜಮೀನು, 2 ನೇ ದಾವಾ ಸ್ವತ್ತಿನಲ್ಲಿ ನನ್ನ ತಂದೆಯವರ ಹೆಸರಿಗೆ 20 ಗುಂಟೆ ಜಮೀನು, 3 ನೇ ದಾವಾ ಸ್ವತ್ತಿನಲ್ಲಿ ನನ್ನ ತಂದೆಯವರ ಹೆಸರಿಗೆ 1 ಎಕರೆ 20 ಗುಂಟೆ ಜಮೀನು ಖಾತೆಯಾಗಿರುತ್ತದೆ ಎಂದರೆ ಸರಿ. ಕಲ್ಲಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ:7/1 ಎ ಜಮೀನಿನಲ್ಲಿ ನನ್ನ ತಂದೆಯವರ ಹೆಸರಿಗೆ 1 ಎಕರೆ ಖಾತೆಯಾಗಿರುತ್ತದೆ ಎಂದರೆ ಸರಿ. ಪ್ರಧಾನ ಮಂತ್ರಿ ಬೆಳೆ ಪರಿಹಾರ ಯೋಜನೆಯಡಿ ನನ್ನ ತಂದೆಯವರ ಖಾತೆಗೆ ಮೇಲೆ ತಿಳಿಸಿದ ಜಮೀನುಗಳಿಗೆ ಸಂಬಂಧಿಸಿದಂತೆ

ಬೆಳೆ ಪರಿಹಾರದ ಹಣವು ಜಮಾಗೊಂಡಿರುತ್ತದೆ ಎಂದರೆ ಸರಿ. ಪ್ರಧಾನ ಮಂತ್ರಿ ಬೆಳೆ ಪರಿಹಾರ ಯೋಜನೆಯಡಿ 1 ರಿಂದ 3ನೇ ಪ್ರತಿವಾದಿಗಳ ತಂದೆ ತಿಮ್ಮಯ್ಯ ಮತ್ತು 5ನೇ ಪ್ರತಿವಾದಿಯಾದ ರಂಗಸ್ವಾಮಿರವರಿಗೂ ಸಹ ಪರಿಹಾರದ ಹಣವು ಜಮಾಗೊಂಡಿರುತ್ತದೆ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಮಲ್ಲಪ್ಪನವರು ಕಾಲವಾಗಿ ಸುಮಾರು 7-8 ವರ್ಷಗಳಾಗಿರುತ್ತದೆ. ಮಲ್ಲಪ್ಪನವರ ಹೆಸರಿಗೆ ಬಂದಂತಹ ಜಮೀನು ನನ್ನ ತಂದೆಯವರಿಗೆ ನೀಡಿರುವುದಿಲ್ಲ ಎಂದರೆ ಸರಿ.

(ಮುಂದುವರೆದ ಪಾಟೀ ಸವಾಲಿಗಾಗಿ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ, ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹೊಸದುರ್ಗ.